ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER :
ದಿನಾಂಕ : DATE : 24/03/2019

ಪೂರ್ವಾನುಮತಿ ಪಡೆಯದೇ ಕೈಗೊಂಡ ನೌಕರರ ನೇಮಕ ರದ್ದು | ರಾಜ್ಯ ಸರ್ಕಾರದಿಂದ ಹೊರಬಿದ್ದ ಆದೇಶ

# 2500 ಗ್ರಾ.ಪಂ. ನೌಕರರ ಉದ್ಯೋಗಕ್ಕೆ ಕತ್ತರಿ

• ದಿನೇಶ್ ಇರಾ

ಮಂಗಳೂರು: ಕೆಲವು ಗ್ರಾಮ ಪಂಚಾಯತ್‌ಗಳು ತಮ್ಮ ಸಾಮಾನ್ಯ ಸಭೆ ಹಾಗೂ ವಿಶೇಷ ಸಭೆ ನಿರ್ಣಯಗಳ ಮೂಲಕ ಮಾಡಿಕೊಳ್ಳಲಾಗಿರುವ ವಿವಿಧ ನೌಕರರ ನೇಮಕಾತಿಯನ್ನು ರದ್ದು ಪಡಿಸುವಂತೆ ರಾಜ್ಯ ಸರ್ಕಾರ ಆದೇಶಿಸಿದೆ.

ಇದಷ್ಟೇ ಅಲ್ಲ, ಇಂಥ ನೇಮಕಕ್ಕೆ ಅವಕಾಶ ಕೊಟ್ಟ ಪಿಡಿಒ, ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರ ವಿರುದ್ಧ ಕ್ರಮ ಜರುಗಿಸುವಂತೆಯೂ ನಿರ್ದೇಶಿಸಿದೆ. ಇದರಿಂದ ಜಿ.ಪಂ. ಪೂರ್ವಾನುಮತಿ ಪಡೆಯದೆ ನೇಮಕಗೊಂಡ ರಾಜ್ಯದ ಸುಮಾರು 2,500 ನೌಕರರು ಕೆಲಸ ಕಳೆದು ಕೊಳ್ಳುವಂತಾಗಿದೆ.

ಗ್ರಾ.ಪಂ.ಗಳು ಯಾವುದೇ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿ 2018ರ ಮಾ.12ರಂದು ಸರ್ಕಾರ ಆದೇಶಿಸಿತ್ತು. ಒಂದು ವೇಳೆ ಬಿಲ್ ಕಲೆಕ್ಟರ್, ಕ್ಲರ್ಕ್/ಡಾಟಾ ಎಂಟ್ರಿ ಆಪರೇಟರ್ ಮತ್ತು ಅಟೆಂಡರ್ ಹುದ್ದೆಗಳು ನಿವೃತ್ತಿ, ಮುಂಬಡ್ತಿ ಮತ್ತು ಇನ್ನಿತರ ಕಾರಣಗಳಿಂದ ಖಾಲಿಯಾದಲ್ಲಿ ನೇಮಿಸಿಕೊಳ್ಳಲು ಸೂಕ್ತ ಕಾರಣದೊಂದಿಗೆ ಜಿ.ಪಂ. ಸಿಇಒ ಪೂರ್ವಾನುಮೋದನೆ ಪಡೆಯಬೇಕು.

> ನೌಕರರನ್ನು ಕೆಲಸದಿಂದ ತೆಗೆಯಬಾರದು. ಅವರಿಗೆ ಕೆಲಸದ ಭದ್ರತೆ ನೀಡಬೇಕು. ಸರ್ಕಾರದ ನಿಯಮ ಗೊತ್ತಿದ್ದೂ ಅದನ್ನು ಉಲ್ಲಂಘಿಸಿ ನೇಮಕ ನಿರ್ಣಯ ಕೈಗೊಂಡವರ ವಿರುದ್ಧ ಕ್ರಮ ಕೈಗೊಳ್ಳಬೇಕು.
> • ದೇವೀಪ್ರಸಾದ್ ಬೊಳ್ಮ, ರಾಜ್ಯ ಗ್ರಾ.ಪಂ. ಶ್ರೇಯೋಭಿವೃದ್ಧಿ ಸಮಿತಿ ಅಧ್ಯಕ್ಷ

ಸಾಮಾನ್ಯವಾಗಿ ಗ್ರಾ.ಪಂ.ಗಳಲ್ಲಿ ಕ್ಲರ್ಕ್, ಬಿಲ್ ಕಲೆಕ್ಟರ್, ಅಟೆಂಡರ್, ಸ್ವಚ್ಛತಾಗಾರ, ಪಂಪ್ ಚಾಲಕರು, ಪಂಪ್ ನಿರ್ವಾಹಕ ಹುದ್ದೆಗಳಿವೆ. ಇವುಗಳಿಗೆ ನೇಮಕ ಮಾಡಿಕೊಳ್ಳಬೇಕಿದ್ದರೆ ಸೂಕ್ತ ಕಾರಣಗಳೊಂದಿಗೆ ಸಂಬಂಧಪಟ್ಟ ಜಿ.ಪಂ. ಸಿಇಒ ಅವರನ್ನು ಕೋರಬೇಕು. ಇಲ್ಲಿ ಪೂರ್ವಾನುಮೋದನೆ ಪಡೆದ ಬಳಿಕ ಪತ್ರಿಕಾ ಪ್ರಕಟಣೆ ಸಹಿತ ವಿವಿಧ ನಿಯಮಾವಳಿ ಅನುಸರಿಸಿ ಆಯಾ ಗ್ರಾ.ಪಂ.ನವರು ಹುದ್ದೆ ಭರ್ತಿಗೆ ಆಯ್ಕೆ ನಡೆಸಬಹುದು. ಇದನ್ನು ಜಿ.ಪಂ. ಗಮನಕ್ಕೆ ತರಬೇಕು. ಆದರೆ ಕೆಲವು ಗ್ರಾ.ಪಂ.ಗಳಲ್ಲಿ ಈ ನಿಯಮಾವಳಿ ಪಾಲಿಸದೆ ಗ್ರಾ.ಪಂ.ನಲ್ಲಿಯೇ ನೌಕರರ ನೇಮಕಾತಿಗೆ ನಿರ್ಧರಿಸಲಾಗುತ್ತದೆ. ಇದು ಕಾನೂನುಬಾಹಿರ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಜತೆಗೆ ಇಂಥ ಹುದ್ದೆಗಳಲ್ಲಿ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚು ಇರುವ ನೌಕರರನ್ನು ಜೇಷ್ಠತೆ ಆಧರಿಸಿ ಖಾಲಿ ಹುದ್ದೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳಬಹುದು. ಆ ಬಳಿಕವೂ ಕೊರತೆಯಾದರೆ ಜಿ.ಪಂ. ಸಿಇಒ ಪೂರ್ವಾನುಮೋದನೆ ಪಡೆದು ನೇಮಕ ಮಾಡಿಕೊಳ್ಳಬೇಕು.

> ಕೆಲವು ಗ್ರಾ.ಪಂ.ನಲ್ಲಿ ನಿಯಮ ಉಲ್ಲಂಘಿಸಿ ನೇಮಕಾತಿ ನಡೆಸಲಾಗುತ್ತಿದೆ. ದ.ಕ. ಜಿಲ್ಲೆಯ 2 ಗ್ರಾ.ಪಂ.ಗಳಲ್ಲಿ ಇಂತಹ ಪ್ರಕರಣಗಳು ನಡೆದಿದ್ದು, ಸಂಬಂಧಪಟ್ಟವರ ವಿರುದ್ಧ ಕ್ರಮಕ್ಕಾಗಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.
> • ಡಾ. ಆರ್. ಸೆಲ್ವಮಣಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸಿಇಒ

ಈ ನಿರ್ದೇಶನಗಳನ್ನು ಉಲ್ಲಂಘಿಸಿ ಅನಧಿಕೃತ ನೇಮಕ ಮಾಡಿಕೊಳ್ಳುವ ಗ್ರಾ.ಪಂ. ಪಿಡಿಒ ವಿರುದ್ಧ ಕರ್ನಾಟಕ ಸಿವಿಲ್ ಸೇವಾ (ಸಿಸಿಎ) ನಿಯಮಗಳು 1957ರನ್ವಯ ಹಾಗೂ ಭಾಗಿಯಾದ ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮದ ಅನ್ವಯ ಕ್ರಮ ಜರಗಿಸಲಾಗುತ್ತದೆ. ಯಾವುದೇ ಹಂತದಲ್ಲಿ ಲೋಪವಾದಲ್ಲಿ ಪಿಡಿಒ ಮತ್ತು ಸಂಬಂಧಪಟ್ಟ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಸೂಚಿಸಿದೆ.

ಕೆಲವು ವರ್ಷದ ಹಿಂದೆ ಇಂಥದ್ದೇ ಪೂರ್ವಾನುಮತಿ ಪಡೆಯದೇ ನೇಮಕ ಮಾಡಿಕೊಂಡ ನೌಕರರನ್ನು ಮಾನವೀಯ ಕಾರಣಕ್ಕಾಗಿ ಸರ್ಕಾರ 'ಖಾಯಂ'ಗೊಳಿಸಿತ್ತು.